## <u>ಪತ್ರಿಕಾ ಪ್ರಕಟಣೆ</u>

## ಅತ್ಯಾಚಾರ ಆರೋಪಿಗೆ ಕಠಿಣ ಶಿಕ್ಷೆ

ವ್ಯಕ್ತಿಯೋರ್ವ ಯುವತಿಯ ಮೇಲೆ ಅತ್ಯಾಚಾರ ವೆಸಗಿದ ಪ್ರಕರಣದಲ್ಲಿ ಆರೋಪಿಗೆ ಘನ ನ್ಯಾಯಾಲಯ ಶಿಕ್ಷೆ ವಿಧಿಸಿದೆ. ಮೂಲತ: ಕೇರಳದ ವಯನಾಡು ಜಿಲ್ಲೆಯ ನಿವಾಸಿ ಕಿವುಡಿ ಮತ್ತು ಮೂಗಿಯಾದ ಶ್ರೀಮತಿ ಶೋಭನಾರವರು ಪೊನ್ನಂಪೇಟೆಯ ಕಾಟ್ರಕೊಲ್ಲಿ ಎಂಬಲ್ಲಿ ವಾಸವಿದ್ದ ಸಮಯದಲ್ಲಿ ಕಾಟ್ರಕೊಲ್ಲಿ ನಿವಾಸಿ ಭಾಸ್ಕರ್ ಎಂಬವರ ಮಗ ಒಡಂಬರ ಬಿ. ಸುರೇಶ್ @ ಅಜೀಶ್ ಎಂಬ ವ್ಯಕ್ತಿ ದಿನಾಂಕ 25-10-2015 ರಿಂದ 12-12-2016ರ ಮಧ್ಯದ ಅವಧಿಯಲ್ಲಿ ಹಲವು ಬಾರಿ ಬಲಾತ್ಕಾರ ಅತ್ಯಾಚಾರವೆಸಗಿರುವುದಲ್ಲದೆ ಆಕೆ 6 ತಿಂಗಳ ಗರ್ಭಿಣಿಯಾದಾಗ ಆಕೆಯನ್ನು ನಂಬಿಸಿ ಔಷಧಿಯನ್ನು ನೀಡಿ ಆಕೆಯ ಗರ್ಭಪಾತಕ್ಕೆ ಕಾರಣವಾದ ಆರೋಪದ ಬಗ್ಗೆ ಕೇರಳದ ಸುಲ್ತಾನ್ ಬತ್ತೇರಿ ಪೊಲೀಸ್ ಠಾಣೆಯಲ್ಲಿ ದಿನಾಂಕ 24-1-2017 ರಂದು ಪ್ರಕರಣ ದಾಖಲಾಗಿದ್ದು, ತದನಂತರ ಕೃತ್ಯಸ್ಥಳದ ಆಧಾರದ ಮೇರೆಗೆ ಕೊಡಗು ಜಿಲ್ಲೆಯ ಪೊನ್ನಂಪೇಟೆ ಪೊಲೀಸ್ ಠಾಣೆಗೆ ವರ್ಗಾಯಿಸಿ ಠಾಣೆಯ ಮೊ.ಸಂ.7/2017 ರಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು.

ಪ್ರಕರಣದ ತನಿಖೆಯನ್ನು ಆಗಿನ ಗೋಣಿಕೊಪ್ಪ ವೃತ್ತ ನಿರೀಕ್ಷಕರಾದ ಪಿ.ಕೆ. ರಾಜುರವರು ನಡೆಸಿದ್ದು ಸದರಿಯವರು ವರ್ಗಾವಣೆಗೊಂಡ ಬಳಿಕ ಗೋಣಿಕೊಪ್ಪ ವೃತ್ತ ನಿರೀಕ್ಷಕರಾದ ಸಿ.ಎನ್. ದಿವಾಕರ ರವರು ಪ್ರಕರಣದ ತನಿಖೆಯನ್ನು ಮುಂದುವರೆಸಿ ಆರೋಪಿ ಸುರೇಶ್ ಯಾನೆ ಅಜೀಶ್ ನನ್ನು ದಿನಾಂಕ 17-3-2017 ರಂದು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದು, ತನಿಖೆ ಪೂರೈಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಪ್ರಕರಣದ ವಿಚಾರಣೆಯನ್ನು ನಡೆಸಿದ ಮಡಿಕೇರಿಯ 3ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಘನ ನ್ಯಾಯಾಧೀಶರಾದ ಡಿ.ಪವನೇಶ್ ರವರು ಆರೋಪಿ ಒಡಂಬರ ಬಿ. ಸುರೇಶ್ ಯಾನೆ ಅಜೀಶ್ ನ ಕೃತ್ಯವು ಸಾಬೀತಾದ ಹಿನ್ನೆಲೆಯಲ್ಲಿ ಆತನಿಗೆ ಕಲಂ 235(2) ಸಿಆರ್‌ಪಿಸಿ ಪ್ರಕಾರ ಕಲಂ 376(2)(ಜೆ) ಐ.ಪಿ.ಸಿಯ ಅಪರಾಧಕ್ಕೆ 10 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು 10.000 ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ 4 ತಿಂಗಳ ಸಾದಾ ಶಿಕ್ಷೆ, ಕಲಂ 376(2)(ಎನ್) ಐಪಿಸಿಯ ಅಪರಾಧಕ್ಕೆ 10 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು 10.000 ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ 4 ತಿಂಗಳ ಸಾದಾ ಶಿಕ್ಷೆ, 315 ಐ.ಪಿ.ಸಿ ಅಪರಾಧಕ್ಕೆ 6 ವರ್ಷಗಳ ಕಠಿಣ ಕಾರಾಗೃಹ ವಾಸ ಮತ್ತು 7.500 ದಂಡ, ದಂಡ ಕಟ್ಟಲು ತಪ್ಪಿದಲ್ಲಿ 3 ತಿಂಗಳ ಸಾದಾ ಶಿಕ್ಷೆ ವಿಧಿಸಿ ತೀರ್ಪು ನೀಡಿರುತ್ತಾರೆ. ಸರ್ಕಾರದ ಪರವಾಗಿ ಸರಕಾರಿ ಅಭಿಯೋಜಕರಾದ ಶ್ರೀಮತಿ ಕೃಷ್ಣವೇಣಿರವರು ವಾದ ಮಂಡಿಸಿದ್ದರು.

ಪ್ರಕರಣದ ತನಿಖೆಯನ್ನು ಸಮರ್ಪಕವಾಗಿ ಪೂರೈಸಿ ಆರೋಪಿಗೆ ಶಿಕ್ಷೆಯಾಗುವಂತೆ ತನಿಖೆಯನ್ನು ನಡೆಸಿದ ತನಿಖಾಧಿಕಾರಿಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ: ಸುಮನ್ ಡಿ.ಪಿ, ಐಪಿಎಸ್., ರವರು ಪ್ರಶಂಸಿಸಿರುತ್ತಾರೆ.

ಸಾರ್ವಜನಿಕ ಸಂಪರ್ಕಾಧಿಕಾರಿ,  
ಕೊಡಗು ಜಿಲ್ಲಾ ಪೊಲೀಸ್.